FEBRUARY 02, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

**ಮುಖ್ಯಾಂಶಗಳು**

<><><>

- ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಿಗೆ, ಕೇಂದ್ರದ ಬಜೆಟ್‌ನಲ್ಲಿ ಯಾವುದೇ ಅನುದಾನ ಘೋಷಿಸಿಲ್ಲ – ಮುಖ್ಯಮಂತ್ರಿ, ಪ್ರತಿಕ್ರಿಯೆ.
- ಹೊಸ ತೆರಿಗೆ ನೀತಿ; 12 ಲಕ್ಷ ರೂಪಾಯಿ ವರೆಗೆ ಆದಾಯ ತೆರಿಗೆ ವಿನಾಯಿತಿ, ಕೇಂದ್ರದ ಕ್ರಮ ಸ್ವಾಗತಾರ್ಹ – ಆರ್. ಅಶೋಕ.
- ಕೇಂದ್ರದ ಬಜೆಟ್, ಮಧ್ಯಮ ಮತ್ತು ಬಡ ವರ್ಗಗಳನ್ನು, ಆರ್ಥಿಕವಾಗಿ ಸಶಕ್ತಗೊಳಿಸಲಿದೆ – ಪ್ರಲ್ಹಾದ ಜೋಶಿ.
- 'ಧರ್ತಿ ಆಭಾ, ಜನಜಾತೀಯ ಗ್ರಾಮ ಉತ್ಕರ್ಷ ಅಭಿಯಾನ'; ಶಿವಮೊಗ್ಗ ಜಿಲ್ಲೆಯ, ವಿರುಪಿನಕೊಪ್ಪ ಮತ್ತು ಸದಾಶಿವಪುರ ಗ್ರಾಮಗಳು, ಆಯ್ಕೆ.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಿಗೆ, ಕೇಂದ್ರದ ಬಜೆಟ್‌ನಲ್ಲಿ ಯಾವುದೇ ಅನುದಾನ ಘೋಷಿಸಿಲ್ಲ; ತಾವು ಸಲ್ಲಿಸಿದ ಯಾವ ಪ್ರಸ್ತಾವಗಳನ್ನೂ ಪರಿಗಣಿಸಿಲ್ಲ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರಿನಲ್ಲಿ ಪ್ರತಿಕ್ರಿಯಿಸಿದ್ದಾರೆ.**

<><><>

**ಮೈಸೂರು ಮುಖ್ಯಮಂತ್ರಿ ಸಿದ್ದರಾಮಯ್ಯ ಧ್ವನಿ 52 ಸೆಕೆಂದುಗಳು**

<><><>

**ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ 5 ಸಾವಿರ ಕೋಟಿ ರೂಪಾಯಿ ವಿಶೇ ' ಅನುದಾನವನ್ನು ಒದಗಿಸಲು, ಪ್ರಸ್ತಾವ ಸಲ್ಲಿಸಲಾಗಿತ್ತು. ಆದರೆ ಬಜೆಟ್‌ನಲ್ಲಿ ಪ್ರಾವಧಾನ ಕಲ್ಪಿಸಿಲ್ಲ ಎಂದು, ಸಚಿವ ಎನ್.ಎಸ್.ಬೋಸರಾಜು, ಹೇಳಿದ್ದಾರೆ.**

<><><>

**ಹೊಸ ತೆರಿಗೆ ನೀತಿ ಅನ್ವಯ, 12 ಲಕ್ಷ ರೂಪಾಯಿ ವರೆಗೆ ಆದಾಯ ತೆರಿಗೆ ವಿನಾಯಿತಿ ನೀಡಿರುವ, ಕೇಂದ್ರ ಸರ್ಕಾರದ ಕ್ರಮ ಸ್ವಾಗತಾರ್ಹ ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ ತಿಳಿಸಿದ್ದಾರೆ.**

<><><>

**ದೇಶದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿ, ಬಡತನ ಮುಕ್ತ ಭಾರತ ನಿರ್ಮಾಣಕ್ಕೆ ನಾಂದಿ ಹಾಡುವ, ವಿಕಸಿತ ಭಾರತ ನಿರ್ಮಾಣದ ದೃಢ ಹೆಜ್ಜೆಗೆ, ಕೇಂದ್ರದ ಬಜೆಟ್ ಪೂರಕವಾಗಿದೆ ಎಂದು, ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಶ್ಲಾಘಿಸಿದ್ದಾರೆ.**

<><><>

**ಬೆಳಗಾವಿ ಸಂಸದ ಈರಣ್ಣ ಕಡಾಡಿ ಧ್ವನಿ 60 ಸೆಕೆಂದುಗಳು**

<><><>

ಕೇಂದ್ರದ ಪ್ರಸಕ್ತ ಸಾಲಿನ ಬಜೆಟ್, ಭಾರತವು ವಿಶ್ವದ 3ನೇ ಅತಿ ದೊಡ್ಡ ಅರ್ಥಿಕತೆಯ ಪಯಣಿಸುವ ಜೊತೆಗೆ, ಮಧ್ಯಮ ಮತ್ತು ಬಡ ವರ್ಗಗಳನ್ನು ಆರ್ಥಿಕವಾಗಿ ಸಶಕ್ತಗೊಳಿಸಲಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ, ಪ್ರಕಟಿಸಿದ್ದಾರೆ.

<><><>

ಈ ಬಾರಿ ಕರ್ನಾಟಕಕ್ಕೆ, 7 ಸಾವಿರದ 564 ಕೋಟಿ ರೂಪಾಯಿ, ರೈಲ್ವೆ ಬಜೆಟ್ ಅಡಿ, ಮೀಸಲಿಡಲಾಗಿದೆ ಎಂದು, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ.

<><><>

ಕೇಂದ್ರದ ಮುಂಗಡ ಪತ್ರದಲ್ಲಿ, ದೇಶದ 50 ಸಾವಿರ ಸರ್ಕಾರಿ ಶಾಲೆಗಳಲ್ಲಿ, ಅಟಲ್ ಟಿಂಕರಿಂಗ್ ಲ್ಯಾಬ್ ತೆರೆಯಲು, ಯೋಜಿಸಲಾಗಿದೆ. ಧಾರವಾಡ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನ್ಯಾಸಕ, ದೀಪಕ ಕುಲಕರ್ಣಿ, ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

<><><>

ಧಾರವಾಡ ದೀಪಕ ಕುಲಕರ್ಣಿ ಧ್ವನಿ 60 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ವಿಶ್ವಾದ್ಯಂತ ಬೆಲೆ ಏರಿಕೆ ಮತ್ತು ಹಣದುಬ್ಬರದ ಮಧ್ಯೆ, ಭಾರತದ ಆರ್ಥಿಕ ಸ್ಥಿತಿಯ ಸುದೃಢೀಕರಣಕ್ಕೆ ಒತ್ತು ನೀಡಿದ ಬಜೆಟ್ ಎಂದು, ಕೊಪ್ಪಳದ ಹಿರಿಯ ಅರ್ಥಶಾಸ್ತ್ರಜ್ಞ ಪ್ರೊಫೆಸರ್ ಬಸವರಾಜ ಐಗೋಳ ಅಭಿಪ್ರಾಯಪಟ್ಟಿದ್ದಾರೆ.

<><><>

ಕೊಪ್ಪಳ ಪ್ರೊ. ಬಸವರಾಜ ಐಗೋಳ ಧ್ವನಿ 60 ಸೆಕೆಂದುಗಳು

<><><>

ಕೇಂದ್ರ ಪುರಸ್ಕೃತ, ಬುಡಕಟ್ಟು ಕಲ್ಯಾಣ ಯೋಜನೆಯ, 'ಧರ್ತಿ ಆಭಾ ಜನಜಾತೀಯ ಗ್ರಾಮ ಉತ್ಕರ್ಷ ಅಭಿಯಾನ'ದಡಿ, ಶಿವಮೊಗ್ಗ ಜಿಲ್ಲೆಯ, ವಿರುಪಿನಕೊಪ್ಪ ಮತ್ತು ಸದಾಶಿವಪುರ ಗ್ರಾಮಗಳು, ಆಯ್ಕೆಯಾಗಿವೆ. ಈ ಎರಡು ಗ್ರಾಮಗಳ ಸರ್ವಾಂಗೀಣ ವಿಕಾಸಕ್ಕೆ, ಯೋಜನೆ ರೂಪಿಸಿ, ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಎನ್.ಹೇಮಂತ್ ತಿಳಿಸಿದ್ದಾರೆ. ಬುಡಕಟ್ಟು ಸಮುದಾಯಕ್ಕೆ ಸೇರಿದ ಜನ ವಾಸಿಸುವ ಗ್ರಾಮಗಳಲ್ಲಿ, ಮೂಲ ಸೌಕರ್ಯ, ಆರೋಗ್ಯ, ಶಿಕ್ಷಣ ಮತ್ತು ಜೀವನೋಪಾಯ ಕೌಶಲ ಕಾರ್ಯಕ್ರಮಗಳನ್ನು ಅನು ಷ್ಠಾನಗೊಳಿಸಲಾಗುವುದು ಎಂದರು.

<><><>

ರಾಜ್ಯದಲ್ಲೇ ಅತಿ ಹೆಚ್ಚು ಬಾಲ್ಯ ವಿವಾಹ ಪ್ರಕರಣಗಳು, ಶಿವಮೊಗ್ಗ ಜಿಲ್ಲೆಯಲ್ಲಿ ವರದಿಯಾಗಿವೆ. ಪೊಕ್ಸೋ ಮತ್ತು ಬಾಲ್ಯ ವಿವಾಹದ ಶೇಕಡ 90 ರಷ್ಟು ಮಕ್ಕಳು, ಸರ್ಕಾರಿ ಶಾಲೆ ಮಕ್ಕಳಾಗಿರುವುದು ಕಳವಳಕಾರಿ ಎಂದು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ, ಅಪರ್ಣಾ ಕೊಳ್ಳ ತಿಳಿಸಿದ್ದಾರೆ. ಶಿವಮೊಗ್ಗ ಬಾಲ ನ್ಯಾಯ ಮಂಡಳಿ ಸಭಾಂಗಣದಲ್ಲಿ, ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಆಯೋಜಿಸಿದ್ದ, ಕಾರ್ಯಾಗಾರವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಶಿಕ್ಷಣ

ಇಲಾಖೆ, ಮಕ್ಕಳ ಹಕ್ಕುಗಳ ರಕ್ಷಣೆಯ ನೋಡಲ್ ಇಲಾಖೆಯಾಗಿದೆ; ರಾಜ್ಯದಲ್ಲಿ 18 ಲಕ್ಷ ವಿದ್ಯಾರ್ಥಿಗಳ 'ಅಪಾರ ಕಾರ್ಡ್ ಅಪ್‌ಡೇಟ್' ಬಾಕಿ ಇದೆ ಎಂದರು.

<><><>

ಈ ತಿಂಗಳ 28 ರಿಂದ, ಮೂರು ದಿನಗಳ ಕಾಲ ಆಯೋಜಿತ, ಹಂಪಿ ಉತ್ಸವವನ್ನು, ಜನೋತ್ಸವವಾಗಿ ಆಚರಿಸಲಾಗುವುದು ಎಂದು, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ. ಕಮಲಾಪುರದಲ್ಲಿ ಆಯೋಜಿಸಿದ್ದ, ಪೂರ್ವಸಿದ್ಧತಾ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ಹಂಪಿ, ಮಲಪನಗುಡಿ ಗ್ರಾಮ ಪಂಚಾಯ್ತಿ ಹಾಗೂ ಕಮಲಾಪುರ ಪಟ್ಟಣ ಪಂಚಾಯ್ತಿಯ ಜನಪ್ರತಿನಿಧಿಗಳು, ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಪಾಲ್ಗೊಂಡಿದ್ದರು.

<><><>

ಪದ್ಮಭೂ ‘ಣ ಡಾಕ್ಟರ್ ಎಚ್. ನರಸಿಂಹಯ್ಯ ಅವರ ಜನ್ಮ ಶತಮಾನೋತ್ಸವ ಹಾಗೂ, ಅವರು ಓದಿದ, ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲೂಕು ಹೊಸೂರು ಗ್ರಾಮದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ, ಶತಮಾನೋತ್ಸವ ಸಮಾರಂಭವನ್ನು, ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ.

<><><>

ಉತ್ತರಾಖಂಡದ ಡೆಹ್ರಾಡೋನ್‌ನಲ್ಲಿ ಆಯೋಜಿತ, 38ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ, ಅಪೂರ್ವ ಪ್ರದರ್ಶನ ನೀಡಿದ, ರಾಜ್ಯದ ಕಳರಿಪಯಟ್ಟು ತಂಡವನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದ್ದಾರೆ. ರಾಜ್ಯದ ಕ್ರೀಡಾಪಟುಗಳು 11 ಕ್ರೀಡೆಗಳಲ್ಲಿ, 17 ಪದಕಗಳನ್ನು ಈ ವರೆಗೆ ಗೆದ್ದಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

12ನೇ ಶತಮಾನದ ಶರಣ, ಶ್ರೀ ಮಡಿವಾಳ ಮಾಚಿದೇವರ ಜಯಂತ್ಯುತ್ಸವವನ್ನು, ನಾಡಿನಾದ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಿದ ವರದಿಗಳು ಬಂದಿವೆ.

<><><>

ನಕ್ಸಲಿಗರ ತಂಡದ ರವೀಂದ್ರ, ಚಿಕ್ಕಮಗಳೂರು ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರಿಗೆ, ಶರಣಾಗಿದ್ದಾರೆ ಎಂದು, ಶಾಂತಿಗಾಗಿ ನಾಗರಿಕ ವೇದಿಕೆ ಮುಖ್ಯಸ್ಥ ಆಶೋಕ್ ಕೆ.ಎಲ್. ತಿಳಿಸಿದ್ದಾರೆ.

<><><>

ಹಾವೇರಿ ಜಿಲ್ಲೆ, ಹಿರೇಕೆರೂರು ತಾಲೂಕು ಕಚವಿ ಗ್ರಾಮಕ್ಕೆ, ಪಶು ಆಸ್ಪತ್ರೆ ಮುಂಜೂರಾಗಿದೆ ಎಂದು ಶಾಸಕ ಯು.ಬಿ.ಬಣಕಾರ ತಿಳಿಸಿದ್ದಾರೆ.

<><><>

ವಿಜಯಪುರ ಜಿಲ್ಲೆಯಲ್ಲಿ, 'ಅನ್ನಭಾಗ್ಯ ಯೋಜನೆ' ಅಡಿ, ಒಟ್ಟು 26 ಕೋಟಿ 46 ಲಕ್ಷ ರೂಪಾಯಿಗಳನ್ನು, ಆದ್ಯತಾ ಪಡಿತರ ಚೀಟಿದಾರರ ಖಾತೆಗೆ ವರ್ಗಾಯಿಸಲಾಗಿದೆ.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಸಂಸ್ಥಾಪಕ ಪ್ರಾಚಾರ್ಯ ಎಸ್. ಡಬ್ಲ್ಯೂ. ಮೆಣಸಿನಕಾಯಿ ಅವರ ಸ್ಮರಣಾರ್ಥ, 15ನೇ ಸಂಸ್ಥಾಪನಾ ದಿನಾಚರಣೆಯನ್ನು, ನಾಡಿದ್ದು ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ, ಬೆಳಗ್ಗೆ 10:30ಕ್ಕೆ ಆಯೋಜಿಸಲಾಗಿದೆ.

<><><>

**ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ.ವೀರಪ್ಪ ಅವರು ಈ ತಿಂಗಳ 12 ರಿಂದ ಮೂರು ದಿನ ಹಾವೇರಿ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಜಿಲ್ಲಾ ಗುರುಭವನದಲ್ಲಿ 20 ಇಲಾಖೆಗಳಿಗೆ ಸಂಬಂಧಿಸಿದ, 124 ಪ್ರಕರಣಗಳ ವಿಚಾರಣೆ ನಡೆಸಲಿದ್ದಾರೆ.**

<><><>